**ಗೌರವಾನ್ವಿತ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಅರಕಲಗೂಡು.**

**ಅಪರಾಧ ಪ್ರಕರಣ ಸಂಖ್ಯೆಃ 59/2019**

| | | |
|---|---|---|
| **ಸಾಕ್ಷಿಯ ಹೆಸರು** | ಎಸ್ ಟಿ ರಾಮಚಂದ್ರ ಬಿನ್ ತಮ್ಮಣ್ಣಗೌಡ | ಚಾಸಾ- 6 |
| **ಉದ್ಯೋಗ** | ಕಾರ್ಯದರ್ಶಿ , ಹೆಬ್ಬಾಲೆ | ಪ್ರಾಸಾ- 7 |
| **ವಾಸ ಸ್ಥಳ** | ಅರಕಲಗೂಡು | |
| **ದಿನಾಂಕಃ 22.01.2026** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು. | | |

**ಮುಖ್ಯ ವಿಚಾರಣೆ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ.

1ನೇ ಆರೋಪಿಯ ಮನೆಯ ಖಾತಾ ವಹಿ ಬೇಕೆಂದು ಪೋಲೀಸರು ಬಂದಿದ್ದು ನಾನು 1ನೇ ಆರೋಪಿಯ ಮನೆಯ 2018-19ನೇ ಸಾಲಿನ ಖಾತಾವಹಿ ನೀಡಿರುತ್ತೇನೆ. ಸಾಕ್ಷಿ ನಿಪಿ 4 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 4ಬಿ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ** ಆರೋಪಿಗಳ ಪರ **ಶ್ರೀ.** ಎಂ ಎನ್ ಆರ್ ವಕೀಲರಿಂದ:

ಪೋಲೀಸರು ನಮಗೆ ಲಿಖಿತವಾಗಿ ಖಾತಾ ವಹಿ ಕೋರಿ ನೋಟೀಸ್ ನ್ನು ದಿಃ 2.12.2018 ರಂದು ನೀಡಿದ್ದರು. ನಿಪಿ 4 ದಾಖಲಾತಿಯಲ್ಲಿ 1ನೇ ಆರೋಪಿ ಮನೆಗೆ ಸೇರಿದ ಖಾತಾ ವಹಿ. ನಿಪಿ 4 ದಾಖಲಾತಿಯಲ್ಲಿ 1ನೇ ಆರೂಪಿ ಹೆಸರು ಇರುವುದಿಲ್ಲ , ಚಾಸಾ 1 ಮತ್ತು ಪೋಲೀಸರ ಜೊತೆ ಷರೀಕ್ಕಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದಿರಿ ದಾಖಲಾತಿ ನೀಡುವ ಕಾಲಕ್ಕೆ ನಾನು ನೈಗೆರೆ ಗ್ರಾಮಪಂಚಾಯ್ತಿ ಯ ಇನ್ ಚಾರ್ಜ್ ಪಿಡಿಓ ಆಗಿದ್ದೆ. ಪೋಲೀಸರು ಯಾವುದೇ ನೋಟೀಸ್ ನೀಡದಿದ್ದರೂ ಪೋಲೀಸರ ಮತ್ತು ಚಾಸಾ 1 ರವರ ಜೊತೆ ಷರೀಕ್ಕಾಗಿ ಚಾಸಾ 1 ರವರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ, ನ್ಯಾಯಾಧೀಶರು,**
**ಅರಕಲಗೂಡು.**